# ಪುರಾಣ ಚರಿತ್ರೆಯ ಸಮನ್ವಯ



ವಲ್ಲಭ
ಸ್ಟಾರ್ ಸುವರ್ಣದ
'ಯಡಯೂರು
ಶ್ರೀಸಿದ್ಧಲಿಂಗೇಶ್ವರ'

◆ **ಇಂತಹ ಕಥೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿನ ಬಿಕ್ಕಟ್ಟುಗಳ ಬಗ್ಗೆ ಹೇಳಿ?**

ಈ ಮೊದಲು ಎರಡು ಪೌರಾಣಿಕ ಧಾರಾವಾಹಿಗಳಲ್ಲಿ ಅಭಿನಯಿಸಿದ್ದೇನೆ. ಆ ಮೂಲಕ ಇಂತಹ ಪಾತ್ರಗಳಿಗೆ ಒಂದಿಷ್ಟು ಒಗ್ಗೂಡಿದ್ದೇನೆ. ಅದೇ ವಿನ್ಯಾಸದ ಕಲಾ ಕೃತಿಯಲ್ಲಿ ಈ ಪಾತ್ರ ಸಿಕ್ಕಿದೆ. ಮೂಲತಃ ರಂಗಭೂಮಿಯ ಕಲಾವಿದ ನಾನು. ಕಾಲೇಜು ರಂಗಭೂಮಿ ಮೂಲಕ ಅಭಿನಯ ಪ್ರಪಂಚವನ್ನು ಪ್ರವೇಶಿಸಿದ್ದೇನೆ. ಪೌರಾಣಿಕ ನಾಟಕಗಳಲ್ಲಿಯೂ ನಟಿಸುವ ಅವಕಾಶ ಸಿಕ್ಕಿವೆ.

ನನ್ನ ಅಮ್ಮ ಗಾಯತ್ರಿ ಸಂಸ್ಕೃತ ಶಿಕ್ಷಕಿ ಭಗದ್ಗೀತೆ, ಅಮರಕೋಶ ಪರಿಚಯಿಸುವ ಮೂಲಕ ಪೌರಾಣಿಕ ಪರಿಕಲ್ಪನೆಯನ್ನು ಮೂಡಿಸಿದ್ದರು. ಈ ಅಂಶಗಳೂ ನಟನೆಗೆ ಸಹಾಯಮಾಡಿವೆ. ಅದನ್ನು ಧಾರಾವಾಹಿಗಳಲ್ಲಿ ಅಳವಡಿಸಿಕೊಳ್ಳುತ್ತಾ ಬಂದಿದ್ದೇನೆ. ಪೌರಾಣಿಕ ಪಾತ್ರಗಳಿಗೆ ಒಂದಿಷ್ಟು ನಿಷ್ಠೆ ಅಗತ್ಯ. ಸಾಮಾನ್ಯ ಪಾತ್ರಗಳಿಗಿಂತ ಅವು ಭಿನ್ನ. ಈ ಪಾತ್ರಗಳು ಮತ್ತೊಬ್ಬರ ಭಾವನಾತ್ಮಕ ಗೌರವವನ್ನು ಕಾಪಾಡುವ ಸವಾಲನ್ನು ಒಡ್ಡಿರುತ್ತವೆ. ಏಕೆಂದರೆ ಸಾವಿರಾರು ಭಕ್ತರು ಇರುತ್ತಾರೆ. ನಾನು ನಿತ್ಯ ಪೂಜೆ ಜಪ ಮಾಡುತ್ತೇನೆ. ಸಾಹಿತ್ಯವನ್ನು ಓದುತ್ತೇನೆ ಹಾಗಾಗಿ ಇಂತಹ ಪಾತ್ರ ಮಾಡುವುದು ಕಷ್ಟ ಆಗಲಾರದು ಎನ್ನುವುದು ನನ್ನ ಭಾವನೆ.

◆ **ರಂಗಾಭಿರುಚಿ ಮೂಡಿದ್ದು ಹೇಗೆ? ಅದು ನಿಮ್ಮ ಬದುಕಿಗೆ ಭರವಸೆ ತುಂಬಿದ್ದು ಹೇಗೆ?**

ಚಿಕ್ಕ ವಯಸ್ಸಿನಲ್ಲಿ ಸಿನಿಮಾ ನೋಡಿ ತೆರೆಯ ಕನಸು ಕಂಡಿದ್ದು ನಿಜ. ಹಾಗೆಂದು ನಟನೆ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಮೊದಲ ವರ್ಷದ ಪದವಿ ಓದುವಾಗ ರಂಗ ಚಟುವಟಿಕೆಗೆ ತೊಡಗುವ ಅವಕಾಶ ಇತ್ತು. ಭಾಗವಹಿಸುವವರಿಗೆ ಹಾಜರಾತಿ ನೀಡುತ್ತಿದ್ದರು. ತರಗತಿ ತಪ್ಪಿಸಿಕೊಳ್ಳುವ ಅವಕಾಶ ಎಂದು ಅಲ್ಲಿಗೆ ಹೋದೆ. ಅಲ್ಲಿನ ವಾತಾವರಣ ಹೆಚ್ಚು ಆಕರ್ಷಣೆ ಮಾಡಿತು. ಆಟದ ಮೂಲಕ ನಟನೆಯನ್ನು ಹೇಳಿಕೊಡುತ್ತಿದ್ದರು. ಅದು ನನ್ನ ಶೈಕ್ಷಣಿಕ ಓದಿಗೂ ತುಂಬ ಸಹಾಯ ಮಾಡಿತು. ನಾಟಕ ಮಾಡಿದ ಮೇಲೆ ಪುರಸ್ಕಾರಗಳು ಸಿಕ್ಕವು. ಕಲಾಗಂಗೋತ್ರಿ ತಂಡದಲ್ಲಿ ಸಕ್ರಿಯನಾದೆ. ರಂಗಭೂಮಿಯಲ್ಲಿಯೇ ತೊಡಗಿಸಬೇಕು ಎನ್ನುವ ಬಯಕೆ ಹುಟ್ಟಿತು. ಅದೇ ಸಮಯದಲ್ಲಿ (2009) ಪಿ.ಶೇಷಾದ್ರಿ ಅವರ 'ಸುಪ್ರಭಾತ' ಧಾರಾವಾಹಿಗೆ ಅವಕಾಶ ಸಿಕ್ಕಿತು. ನಾಟಕದಂತೆ ಮಾಡ್ತಾ ಇದ್ದೆ, ಕಿರುತೆರೆಯ ವ್ಯಾಕರಣವೇ ಗೊತ್ತಿರಲಿಲ್ಲ. ಅಲ್ಲಿ ಸ್ವಲ್ಪ ಪಾಲಿಶ್ ಮಾಡಿದ್ದರಿಂದ ಕಲಿಯಲು ಸಾಧ್ಯವಾಯಿತು. ಆದರೂ ಅದು ಬೇಡ ಅಂದುಕೊಂಡು ರಂಗಭೂಮಿಗೆ ಮರಳಿದೆ. 'ಸೀತೆ'ಯಲ್ಲಿ ಲಕ್ಷ್ಮಣನ ಪಾತ್ರಕ್ಕೆ ಮತ್ತೆ ಬಣ್ಣ ಹಚ್ಚಬೇಕಾಯಿತು. ಆ ಪಾತ್ರ ಸಿಕ್ಕಿದೆ ಎಂದು ಖುಷಿಯೂ ಆಯಿತು. ನಂತರ 'ಮಹಾಭಾರತ'ದಲ್ಲಿ ಕೃಷ್ಣನಾಗಿ ಮಾಡಿದೆ. 'ಅನುರಾಗ ಸಂಗಮ', 'ಅಳಿಗುಳಿಮನೆ', 'ಅಣ್ಣಯ್ಯ', 'ಪತ್ತೆದಾರಿ ಪ್ರತಿಭಾ', 'ಮಹಾಲಕ್ಷ್ಮಿ'ಯಲ್ಲಿ ಪ್ರಮುಖ ಪಾತ್ರಗಳನ್ನು ಮಾಡಿದೆ. ರಾಘವೇಂದ್ರ ರಾಜ್‌ಕುಮಾರ್ ಅವರ ಜೊತೆ 'ರಾಜ ತಂತ್ರ' ಎನ್ನುವ ಸಿನಿಮಾದಲ್ಲಿ ಚಿಕ್ಕ ಪಾತ್ರ ಮಾಡಿದ್ದೇನೆ. 'ನಾತಿಚರಾಮಿ'ದಲ್ಲಿಯೂ ಚಿಕ್ಕ ಪಾತ್ರ ಮಾಡಿದ್ದೆ. ನಾನು ನನ್ನ ಪತ್ನಿ ಸೇರಿ ಒಂದು ಸಂಸ್ಥೆಯನ್ನು ಕಟ್ಟಿದ್ದೇವೆ. ನೃತ್ಯ– ಸಂಗೀತ ಚಟುವಟಿಕೆಗಳನ್ನು ಮಾಡುತ್ತಿದ್ದೇವೆ.

◆ **ಈ ಪಾತ್ರದ ಬಗ್ಗೆ ಹೇಳುವುದಾದರೆ...**

ಇದನ್ನು ನವೀನ್ ಕೃಷ್ಣ ನಿರ್ದೇಶನ ಮಾಡಿದ್ದಾರೆ. ಸೂಕ್ಷ್ಮವಾಗಿ ಸಣ್ಣ ಸಣ್ಣ ಸಂಗತಿಗೂ ಪ್ರಾಮುಖ್ಯತೆಯನ್ನು ಅವರು ನೀಡುತ್ತಾರೆ. ಇದು ಹೊಸ ತಂಡ. ನನ್ನ ಗುರುಗಳು ಕೃಷ್ಣಮೂರ್ತಿ ಕವತ್ತಾರ್ ಅಭಿನಯಿಸುತ್ತಿದ್ದಾರೆ. ಅದು ನನ್ನ ಖುಷಿಯನ್ನು ದ್ವಿಗುಣ ಮಾಡಿದೆ. ಯಡಯೂರು ಸಿದ್ದಲಿಂಗೇಶ್ವರ ಸ್ವಾಮೀಜಿ ಬಗ್ಗೆ ಅನೇಕ ಐತಿಹ್ಯಗಳಿವೆ. ಅವರೊಬ್ಬ ಅವತಾರ ಪುರುಷ, ಪವಾಡಪುರುಷ ಎನ್ನುವ ನಂಬಿಕೆ ಇದೆ. 12ನೇ ಶತಮಾನದ ನಂತರ ಅವತರಿಸಿದ ಅವಧೂತ ಎನ್ನಲಾಗುತ್ತಿದೆ. ನೇಪಾಳದವರೆಗೂ ಅವರು ಸಂಚರಿಸಿದವರು. ಕೊನೆಗೆ ಯಡಿಯೂರಿಗೆ ಬಂದು ತಪ್ಪಸ್ಸು ಮಾಡುತ್ತಾರೆ ಎನ್ನುವ ಅಂಶವೇ ಕಥೆಯ ಹೂರಣ.

◆ **ಸಾಮಾನ್ಯ ಹುಡುಗ ಸೆಲೆಬ್ರಿಟಿ ಆದ ನಂತರ ಆತನ ಬದುಕು ಹೇಗಿರುತ್ತದೆ?**

ಎಲ್ಲೆಂದರಲ್ಲಿ ಸುತ್ತಾಡ್ತಾ ಇದ್ದೆವು. ಈಗ ಅದಕ್ಕೆಲ್ಲ ಸ್ವಲ್ಪ ತೊಡಕು ಆಗುತ್ತದೆ. ಎಲ್ಲಾದರೂ ಗುರುತಿಸಿದರೆ ನಮಗೂ ಖುಷಿ ಆಗುತ್ತದೆ. ಆದರೂ ಆ ಸ್ವಾತಂತ್ರ್ಯ ಸ್ವಲ್ಪ ಕಡಿಮೆ ಆಗುತ್ತದೆ. ನನ್ನ ಎಲ್ಲ ಪಾತ್ರಗಳು ಲುಕ್ ಬದಲಾಗುತ್ತಿರುತ್ತದೆ. ಸುಲಭವಾಗಿ ಗುರುತಿಸುವುದಿಲ್ಲ. ಇವರು ಹೌದೋ ಅಲ್ಲವೋ ಎಂದು ಮಾತನಾಡಿಕೊಳ್ಳುತ್ತಾರೆ. ಒಂದೇ ರೀತಿಯ ಪಾತ್ರವನ್ನು ಮಾಡಿಲ್ಲ. ಇದೆಲ್ಲವೂ ನನಗೆ ಇಷ್ಟ ಆಗುತ್ತದೆ.

■ **ರಾಘವೇಂದ್ರ ಕೆ.**